# ಹೆಚ್ಚುವರಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಅಂಕೋಲಾ.

## ಸಿಸಿ ನಂಬರ 685/2022

**ಪಿರ್ಯಾದಿಃ** **ಸರಕಾರ**

**–ವಿರುದ್ಧ –**

**ಆರೋಪಿ:** ಮೇಘಸಿಂಗ್ ತಂ. ಬಟೂರಿಸಿಂಗ್,
ವಯಸ್ಸುಃ44 ವರ್ಷ, ವೃತ್ತಿಃ ಚಾಲಕ,
ಸಾಃ ಮನೆ ನಂ.123, ಜವಾರಹಪುರಮ್ ಕಾಲನಿ,
ನೀರಿನ ಟ್ಯಾಂಕ್ ಹತ್ತಿರ, ಶಹಗಂಜ್, ಆಗ್ರಾ ಜಿಲ್ಲೆ,
ಉತ್ತರ ಪ್ರದೇಶ ರಾಜ್ಯ–282010

### ಆಪಾದನೆ

ದಿನಾಂಕಃ 19–07–2022 ರಂದು ಬೆಳಿಗ್ಗೆ 07–00 ಗಂಟೆಗೆ ಅಂಕೋಲಾ ಪೊಲೀಸ ಠಾಣಾ ವ್ಯಾಪ್ತಿಯಲ್ಲಿ ಬರುವ ಅಂಕೋಲಾ ತಾಲೂಕಿನ ರಾಮನಗುಳಿಯ ದುಗ್ಗನಬೈಲ್ ದಿಂದ ಹಾಯ್ದಿರುವ ರಾಷ್ಟ್ರೀಯ ಹೆದ್ದಾರಿ ಎನ್.ಎಚ್ –63 ರಸ್ತೆಯಲ್ಲಿ ಆರೋಪಿಯಾದ ನೀವು ಕಂಟೇನರ ಲಾರಿ ನಂ. ಕೆಎ–01/ಎ.ಎಲ್–4176 ನೇದನ್ನು ಅಂಕೋಲಾ ಕಡೆಯಿಂದ ಯಲ್ಲಾಪುರ ಕಡೆಗೆ ಅತೀವೇಗ ಮತ್ತು ಅಜಾಗರೂಕತೆಯಿಂದ ಮಾನವೀಯ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಲಾಯಿಸಿಕೊಂಡು ಬಂದು ನಿಮ್ಮ ಮುಂದೆ ಹೋಗುತ್ತಿದ್ದ ಯಾವುದೋ ಒಂದು ವಾಹನಕ್ಕೆ ಓವರಟೇಕ್ ಮಾಡಲು ಹೋಗಿ ಕಂಟೇನರ ಲಾರಿ ವಾಹನವನ್ನು ರಸ್ತೆಯ ಬಲಕ್ಕೆ ಚಲಾಯಿಸಿ, ಎದುರಿನಿಂದ ಅಂದರೆ ಯಲ್ಲಾಪುರ ಕಡೆಯಿಂದ ಅಂಕೋಲಾ ಕಡೆಗೆ ತನ್ನ ಸೈಡಿನಿಂದ ಬರುತ್ತಿದ್ದ ಕೋಸ್ತ ಗೂಡ್ಸ ವಾಹನ ನಂ. ಕೆಎ–31/ಎ–0905 ನೇದಕ್ಕೆ ಮುಂದಿನಿಂದ ಡಿಕ್ಕಿ ಹೊಡೆದು ಅಪಘಾತಪಡಿಸಿರುತ್ತೀರಿ. ಆ ಮೂಲಕ ಭಾ. ದಂ. ಸಂ. ಕಲಂ 279 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಿ ಅಂತಾ ನಿಮ್ಮ ಮೇಲೆ ಆಪಾದನೆ ಇರುತ್ತದೆ.

ಎರಡನೇಯದಾಗಿ, ಮೇಲೆ ಹೇಳಿದ ದಿನ, ಸ್ಥಳ ಮತ್ತು ಸಮಯದಂದು ಆರೋಪಿಯಾದ ನೀವು ಅಪಘಾತಪಡಿಸಿದ್ದರಿಂದ ಗೂಡ್ಸ ವಾಹನ ಚಾಲಕ ಕಿರಣ ತಂ. ಚಂದರಶೇಖರ ಕೆಳಗಿನಮನೆ ಇತನಿಗೆ ಬಲಕಣ್ಣಿನ ಹತ್ತಿರ, ಬಲಕೆನ್ನೆಗೆ, ಬಲಕಾಲಿನ ಮಂಡಿಯ ಕೆಳಗೆ ಗಂಭೀರ ಗಾಯ ನೋವುಪಡಿಸಿ ಸ್ಥಳದಲ್ಲಿಯೇ ಮರಣವನ್ನುಂಟಾಗುವಂತೆ ಮಾಡಿರುತ್ತೀರಿ. ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 304(ಎ) ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಿ ಅಂತಾ ನಿಮ್ಮ ಲೆ ಆಪಾದನೆ ಇರುತ್ತದೆ.

ಪ್ರಶ್ನೆಃ 1 ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾದ ಆಪಾದನೆ ಬಗ್ಗೆ ನಿಮಗೆ ಅರ್ಥವಾಯಿತೇ?

ಉತ್ತರಃ

ಪ್ರಶ್ನೆಃ 2 ಮೇಲ್ಕಂಡ ಅಪರಾಧಗಳಿಗೆ ಸಂಬಂಧಪಟ್ಟಂತೆ ತಪ್ಪು ಒಪ್ಪಿಕೊಳ್ಳುತ್ತೀರಿ ಅಥವಾ ವಿಚಾರಣೆ ಆಗಬೇಕು ಅಂತಾ ಬಯಸುತ್ತೀರಿ?

ಉತ್ತರಃ

( ಮೇಲಿನ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ತಿಳಿಸಿ ಆತನು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.)

sd/-

ದಿನಾಂಕಃ 26-6- 2023 **( ಅರ್ಪಿತಾ ಬಿ. ಬೆಲ್ಲದ)**

ಅಂಕೋಲಾ **ಹೆಚ್ಚುವರಿ ಪ್ರ ದ ನ್ಯಾದಂ, ಅಂಕೋಲಾ.**

ಆರೋಪಿಯ ಸಹಿ.